MAY 09, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

- ʻಆಪರೇಷನ್ ಸಿಂಧೂರ್ʼ; ರಾಜ್ಯದ ಎಲ್ಲ ಜಲಾಶಯಗಳಿಗೆ ವ್ಯಾಪಕ ಭದ್ರತೆ.
- ಭಾರತದ ಮಂದಿರಗಳು, ರಾಷ್ಟ್ರೀಯ ದೃಷ್ಟಿಕೋನದ ಪ್ರತೀಕ – ಕೇಂದ್ರ ಸಚಿವ ಗಜೇಂದ್ರಸಿಂಗ್ ಶೇಖಾವತ್.
- ಥಲಸ್ಸೇಮಿಯಾ; ಆನುವಂಶಿಕ ರಕ್ತರೋಗಗಳ, ಜನಜಾಗೃತಿ ದಿನಾಚರಣೆ.
- ಹಿರಿಯರ ಜಲಮೂಲ ರಚನೆಗಳ ಪುನಃಶ್ಚೇತನಕ್ಕೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಯೋಜನೆ.

<><><>

ಈಗ ವಾರ್ತೆಗಳ ವಿವರ

<><><>

ʻಆಪರೇಷನ್ ಸಿಂಧೂರ್ʼ ಪ್ರಗತಿಯಲ್ಲಿರುವ ಹಿನ್ನೆಲೆ, ರಾಜ್ಯದ ಎಲ್ಲ ಜಲಾಶಯಗಳಿಗೆ ವ್ಯಾಪಕ ಭದ್ರತೆ ಕಲ್ಪಿಸಲಾಗಿದೆ. ಕಲ್ಯಾಣ ಕರ್ನಾಟಕದ ಜೀವನಾಡಿ, ವಿಜಯನಗರ ಜಿಲ್ಲೆ, ಹೊಸಪೇಟೆ ಬಳಿಯ, ತುಂಗಭದ್ರಾ ಜಲಾಶಯಕ್ಕೆ, ಕೈಗಾರಿಕಾ ಭದ್ರತಾ ಪಡೆಯನ್ನು, ರಕ್ಷಣೆಗಾಗಿ ನಿಯೋಜಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿ ಾಧಿಕಾರಿಗಳ ಮಾರ್ಗದರ್ಶನದಲ್ಲಿ, ಡಿ.ವೈ.ಎಸ್ಪಿ. ಸೇರಿದಂತೆ, ವಿಶೇ ʼ ತರಬೇತಿ ಪಡೆದ, 39 ಸಿಬ್ಬಂದಿಯನ್ನು, ನಿಯೋಜಿಸಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಪೊಲೀಸ್ ಇನ್ಸ್‌ಪೆಕ್ಟರ್ ಚಂದ್ರಶೇಖರ.

<><><>

ಪೊಲೀಸ್ ಇನ್ಸ್‌ಪೆಕ್ಟರ್ ಚಂದ್ರಶೇಖರ ಧ್ವನಿ 35 ಸೆಕೆಂದುಗಳು

<><><>

ʻಆಪರೇಷನ್ ಸಿಂಧೂರ್ʼ ಪ್ರಗತಿಯಲ್ಲಿರುವ ಹಿನ್ನೆಲೆ, ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲೂಕು, ಆಲಮಟ್ಟಿಯ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿ ಜಲ ಸಂಗ್ರಹಾಗಾರಕ್ಕೆ, ರಾಜ್ಯ ಕೈಗಾರಿಕಾ ಭದ್ರತಾ ಪಡೆ ಭದ್ರತೆ ಒದಗಿಸುತ್ತಿದೆ. ಅಣೆಕಟ್ಟೆಯ ಹಿನ್ನೀರಿನಲ್ಲಿ, ದೋಣಿ ಬಳಸಿ, ಹಗಲೂ ರಾತ್ರಿ ಪಹರೆ ನಡೆಸಲಾಗುತ್ತಿದೆ. ನೀರಿನ ಪ್ರಮಾಣ ಕಡಿಮೆ ಇರುವ ಹಿನ್ನೆಲೆ, ಜಲಾಶಯದ ಕೆಳ ಭಾಗದಲ್ಲಿ, ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ. ಹಿರಿಯ ಅಧಿಕಾರಿಗಳಿಗೆ, ಕೇಂದ್ರ ಸ್ಥಾನ ಬಿಟ್ಟು ತೆರಳದಂತೆ, ನಿರ್ದೇಶನ ನೀಡಲಾಗಿದೆ.

<><><>

ರಾಯಚೂರು ತಾಲೂಕಿನ, ಶಕ್ತಿನಗರದ ಆರ್.ಟಿ.ಪಿ.ಎಸ್.ನಲ್ಲಿ ಇಂದು ಸಂಜೆ 4 ರಿಂದ ಅಣಕು ಕಾರ್ಯಾಚರಣೆ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ನಿತೀಶ್ ತಿಳಿಸಿದ್ದಾರೆ.

<><><>

'ಆಪರೇಷನ್ ಸಿಂಧೂರ' ಹಿನ್ನೆಲೆ, ಉತ್ತರಕನ್ನಡ ಜಿಲ್ಲೆ, ಕಾರವಾರ ತಾಲೂಕಿನ, ಬಿಣಗಾದ ಗ್ರಾಸಿಂ ಇಂಡಸ್ಟ್ರೀಸ್, ಅಮದಳ್ಳಿಯ ನೌಕಾ ನೆಲೆ ಬಳಿಯ, ನಾಗರಿಕ ವಸತಿ ಸಮುಚ್ಛಯ, ಕೈಗಾ ಅಣು ಸ್ಥಾವರ, ರವೀಂದ್ರನಾಥ ಠಾಕೂರ ಕಡಲ ತೀರ ಹಾಗೂ ಕರ್ನಾಟಕ ವಿದ್ಯುತ್ ನಿಗಮದ ಅಣೆಕಟ್ಟೆಗಳಿರುವ, ಹರ್ಟುಗಾ ಗ್ರಾಮದಲ್ಲಿ, 12ನೇ ತಾರೀಖು, ಅಣಕು ಕಾರ್ಯಾಚರಣೆ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆಯನ್ನು 'ಕೆಟಗಿರಿ 2' ರಲ್ಲಿ ಸೇರ್ಪಡೆ ಮಾಡಲಾಗಿದೆ. ಬ್ಲಾಕ್ ಔಟ್ ಸೇರಿದಂತೆ, ಒಟ್ಟು ಆರು ವಿವಿಧ ರೀತಿಯ ಕಾರ್ಯಾಚರಣೆಗಳನ್ನು ನಡೆಸಲಾಗುವುದು, ಎಂದರು.

<><><>

ಭಾರತೀಯ ಸೇನೆ, "ಆಪರೇಷನ್ ಸಿಂಧೂರ" ಮೂಲಕ, ಉಗ್ರರ ನೆಲೆಗಳನ್ನು ಯಶಸ್ವಿಯಾಗಿ ಧ್ವಂಸಗೊಳಿಸಿದ ಹಿನ್ನೆಲೆ, ದೇಶದ ಹೆಮ್ಮೆಯ ಸೈನಿಕರಿಗೆ, ಶಕ್ತಿ ತುಂಬಲು, ಅವರ ಶ್ರೇಯಸ್ಸಿಗಾಗಿ, ರಾಜ್ಯದ ಎಲ್ಲ ವಕ್ಫ್ ಬೋರ್ಡ್‌ಗೆ ಸೇರಿದ ಮಸೀದಿ ಹಾಗೂ ಇತರೆ ಮಸೀದಿಗಳಲ್ಲಿ, ವಿಶೇಷ ಪ್ರಾರ್ಥನೆ ಸಲ್ಲಿಸಲು, ವಕ್ಫ್ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಖಾತೆ ಸಚಿವ ಬಿ.ಝೆಡ್. ಜಮೀರ್ ಅಹ್ಮದ್ ಖಾನ್ ಸೂಚಿಸಿದ್ದಾರೆ.

<><><>

ಲೆಫ್ಟಿನೆಂಟ್ ಕರ್ನಲ್ ಸೋಫಿಯಾ ಖುರೇಷಿ, ಜೀವನದ ಯಶೋಗಾಥೆ ಸ್ಫೂರ್ತಿದಾಯಕ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಣ್ಣಿಸಿದ್ದಾರೆ. ಕರ್ನಾಟಕದ, ಬೆಳಗಾವಿಯ ಹೆಮ್ಮೆಯ ಸೊಸೆ ಕೂಡ ಹೌದು ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ತಿಳಿಸಿದ್ದಾರೆ. ಲೆಫ್ಟಿನೆಂಟ್ ಕರ್ನಲ್ ಸೋಫಿಯಾ ಖುರೇಷಿ, ಭಯೋತ್ಪಾದನೆಯ ವಿರುದ್ಧ, ಭಾರತದ ಪ್ರಬಲವಾದ ನಿಲುವನ್ನು, ಹೆಮ್ಮೆಯಿಂದ ಪ್ರದರ್ಶಿಸಿದ್ದಾರೆ. ಆಪರೇಷನ್ ಸಿಂಧೂರ್ ಘಟನಾವಳಿಗಳನ್ನು, ಜಗತ್ತಿನ ಮುಂದೆ ಪ್ರಸ್ತುತಪಡಿಸಿ, ನಾರಿ ಶಕ್ತಿಯ ಸಂಕೇತವಾಗಿದ್ದಾರೆ, ಎಂದು ಶ್ಲಾಘಿಸಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕು ಕೊಣ್ಣೂರ ಗ್ರಾಮದಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದೆ. 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ಯಶಸ್ಸನ್ನು ಜಗತ್ತಿಗೆ ತಿಳಿಸಿದ, ಲೆಫ್ಟಿನೆಂಟ್ ಕರ್ನಲ್ ಸೋಫಿಯಾ ಖುರೇಶಿ, ಈ ಗ್ರಾಮದ ಸೊಸೆ. ಭಾರತೀಯ ಸೇನೆಯಲ್ಲಿ ಕರ್ನಲ್ ಆಗಿರುವ, ಸೋಫಿಯಾ ಅವರ ಪತಿ ತಾಜುದ್ದೀನ್ ಬಾಗೇವಾಡಿ, ಕೊಣ್ಣೂರಿನವರು. ಪ್ರದೇಶ ಸಮಾಚಾರಕ್ಕಾಗಿ, ಸೋಫಿಯಾ ಅವರ ಮಾವ, ಗೌಸ್ ಸಾಬ್ ಬಾಗೇವಾಡಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಗೌಸ್‌ಸಾಬ್ ಬಾಗೇವಾಡಿ ಧ್ವನಿ 30 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಪೆಹಲ್ಗಾಮ್ ನರಮೇಧಕ್ಕೆ ಪ್ರತೀಕಾರವಾಗಿ, ಆಪರೇ ’ನ್ ಸಿಂಧೂರ ಕಾರ್ಯಾಚರಣೆ ನಡೆಸುತ್ತಿರುವ, ಭಾರತೀಯ ಯೋಧರಿಗೆ, ಬೆಂಬಲ ಸೂಚಿಸಲು, ಇಂದು ಬೆಳಗ್ಗೆ 9.30 ರಿಂದ 10.30ರ ವರೆಗೆ, ಬೆಂಗಳೂರಿನ ಕೆ.ಆರ್. ವೃತ್ತದಿಂದ, ಚಿನ್ನಸ್ವಾಮಿ ಕ್ರೀಡಾಂಗಣ ಬಳಿಯ, ಕೆ.ಎಸ್.ಸಿ.ಎ ವರೆಗೆ, ‘ತಿರಂಗಾ ಯಾತ್ರೆ’ ಆಯೋಜಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಹೆಚ್ಚಿನ ಸಂಖೆಯಲ್ಲಿ, ತಿರಂಗಾ ಯಾತ್ರೆಯಲ್ಲಿ ಪಾಲ್ಗೊಂಡು, ದೇಶಪ್ರೇಮ ಮೆರೆಯೋಣ ಎಂದು, ಅವರು ಕರೆ ನೀಡಿದ್ದಾರೆ.

<><><>

ಭಾರತದ ದೇಗುಲಗಳು, ಮಠ, ಮಂದಿರಗಳು, ರಾಷ್ಟ್ರೀಯ ದೃಷ್ಟಿಕೋನದ ಪ್ರತೀಕವಾಗಿವೆ ಎಂದು, ಕೇಂದ್ರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಖಾತೆ ಸಚಿವ ಗಜೇಂದ್ರಸಿಂಗ್ ಶೇಖಾವತ್ ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ, 5ನೇ ಧರ್ಮಕರ್ತರಾದ, ಶ್ರೀ ವೆಂಕಟಸುಬ್ಬಯ್ಯ ಜೋಯಿಸ ಹಾಗು ನರಸಮ್ಮ ದಂಪತಿಗಳ ಪುತ್ಥಳಿ ಅನಾವರಣಗೊಳಿಸಿ, ಮಾತನಾಡಿದರು. ಶ್ರದ್ಧಾ ಕೇಂದ್ರಗಳು, ಪ್ರಧಾನಮಂತ್ರಿಯವರ ಆಶಯದಂತೆ, ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಸಶಕ್ತತೆಯ ಕೇಂದ್ರಗಳಾಬೇಕು ಎಂದರು.

<><><>

ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್ ಮಾತನಾಡಿ, ಹಿಂದು ಧರ್ಮವು, ವಿಶ್ವ ಬಂಧುತ್ವ, ವಿಶ್ವ ಶಾಂತಿಯನ್ನು ಪ್ರೇರೇಪಿಸುತ್ತದೆ ಎಂದರು.

<><><>

‘ಥಲಸ್ಸೇಮಿಯಾಗಾಗಿ ಸಂಘಟಿತರಾಗೋಣ; ಸಮುದಾಯಗಳನ್ನು ಒಗ್ಗೂಡಿಸೋಣ ಹಾಗೂ ಆರೋಗ್ಯಾಕಾಂಕ್ಷಿಗಳಿಗೆ ಆದ್ಯತೆ ನೀಡೋಣ’ ಎಂಬ ಧ್ಯೇಯದೊಂದಿಗೆ, ಆನುವಂಶಿಕ ರಕ್ತ ರೋಗಗಳ ಬಗ್ಗೆ ಜನಜಾಗೃತಿ ದಿನಾಚರಣೆ ಜರುಗಿತು.

<><><>

ಕೇಂದ್ರ ಸರ್ಕಾರ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ, ಕೋಲ್ ಇಂಡಿಯಾ ಲಿಮಿಟೆಡ್ ಸಹಯೋಗದಲ್ಲಿ ಥಲಸ್ಸೇಮಿಯಾ ಬಾಲಸೇವಾ ಯೋಜನೆ ರೂಪಿಸಿದೆ. ಅಸ್ಥಿಮಜ್ಜೆ ಕಸಿಗೆ 10 ಲಕ್ಷ ರೂಪಾಯಿ ಧನಸಹಾಯ, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ ಅಡಿ, ಅಸ್ಥಿಮಜ್ಜೆ ಕಸಿಗಾಗಿ ಪರಿಶಿಷ್ಟ ಸಮುದಾಯದ ಥಲಸ್ಸೇಮಿಯಾ ರೋಗಿಗಳಿಗೆ, 7 ಲಕ್ಷದಿಂದ 21 ಲಕ್ಷದ ವರೆಗೆ, ಸಹಾಯ ಧನ ದೊರಕುತ್ತದೆ.

<><><>

ಹಾವೇರಿ ಜಿಲ್ಲೆ ಅಕ್ಕಿಆಲೂರನ್ನು ರಕ್ತ ಸೈನಿಕರ ತವರು ಎನ್ನಲಾಗುತ್ತದೆ. ಅಲ್ಲಿನ ಯುವ ರಕ್ತದಾನಿಗಳು ಪ್ರತಿವರ್ಷ ಬಹಳಷ್ಟು ಸಂಖ್ಯೆಯಲ್ಲಿ ರಕ್ತದಾನ ಮಾಡಿ, ಥಲಸ್ಸೇಮಿಯಾ ರೋಗಿಗಳಿಗೆ ರಕ್ತವನ್ನು ಮೀಸಲಿರಿಸುತ್ತಾರೆ.

<><><>

ರಾಜ್ಯದಲ್ಲಿ 36 ಥಲಸ್ಸೇಮಿಯಾ ಡೆ-ಕೇರ್ ಕೇಂದ್ರಗಳಿವೆ. ಚಿಕಿತ್ಸಾ ಕೇಂದ್ರಗಳಲ್ಲಿ ನೋಂದಾಯಿತ 2028 ರೋಗಿಗಳು ಚಿಕಿತ್ಸೆ ಪಡೆಯುತ್ತಾರೆ.

<><><>

<><><>

ಬೆಂಗಳೂರಿನ ಜಯದೇವ ಸ್ಮಾರಕ ಆಸ್ಪತ್ರೆಯ, ಸಂರಕ್ಷಾ ಆರೈಕೆ ಕೇಂದ್ರ, ಕಳೆದ 12 ವರ್ಷಗಳಿಂದ 400ಕ್ಕೂ ಅಧಿಕ ಥಲಸ್ಸೇಮಿಯಾ ಪೀಡಿತರಿಗೆ ಉಚಿತ ಚಿಕಿತ್ಸೆ, ಔಷಧಿ ಹಾಗೂ ಆಪ್ತಸಮಾಲೋಚನೆ ಒದಗಿಸುತ್ತಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ ರಾಷ್ಟ್ರೋತ್ಥಾನ ಪರಿಷತ್‌ನ ಖಜಾಂಚಿ, ಕೆ.ಎಸ್.ನಾರಾಯಣ್.

<><><>

ಕೆ.ಎಸ್. ನಾರಾಯಣ್ ಧ್ವನಿ 60 ಸೆಕೆಂದುಗಳು

<><><>

ಕೆರೆ ಒತ್ತುವರಿ ತೆರವುಗೊಳಿಸಿ, ಹೂಳೆತ್ತಿ, ಜಲಮೂಲಗಳನ್ನು ಉಳಿಸಿ, ಪುನಃಶ್ಚೇತನಗೊಳಿಸುವ ನಿಟ್ಟಿನಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪ್ರಾಮಾಣಿಕ ಪ್ರಯತ್ನ ಕೈಗೊಂಡಿದೆ ಎಂದು, ಸಚಿವ ಪ್ರಿಯಾಂಕ ಖರ್ಗೆ, ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಮಾಹಿತಿ ನೀಡಿ, ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ, ಕೊತ್ತೇಗಾಲ ಗ್ರಾಮ ಪಂಚಾಯಿತಿಯ, ತಮ್ಮಡಹಳ್ಳಿ ಗ್ರಾಮದ, ಬೀರೇಶ್ವರ ದೇವಾಲಯದ ಆವರಣದಲ್ಲಿ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ, ಕಲ್ಯಾಣಿ ಅಭಿವೃದ್ಧಿ ಪಡಿಸಲಾಗಿದೆ. ಜಲ ಸುಸ್ಥಿರತೆಗಾಗಿ ಹಿರಿಯರು ನಿರ್ಮಿಸಿದ ರಚನೆಗಳನ್ನು ಪುನಃಶ್ಚೇತನಗೊಳಿಸುವ, ಸಂಕಲ್ಪ ಹೊಂದಲಾಗಿದೆ, ಎಂದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು ಮಹಾರಾಣಾ ಪ್ರತಾಪ ಸಿಂಹ ಅವರ, ಜಯಂತ್ಯುತ್ಸವ.

<><><>

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಶ್ರೀ ಬಸವೇಶ್ವರ ಅಧ್ಯಯನ ಪೀಠದಲ್ಲಿ, ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷ, ಪ್ರಭಾಕರ ಕೋರೆ ಅವರು, ಬಸವೇಶ್ವರ ವಸ್ತುಸಂಗ್ರಹಾಲಯವನ್ನು ಲೋಕಾರ್ಪಣೆಗೊಳಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಆಪರೇಷನ್ ಸಿಂಧೂರ್'; ರಾಜ್ಯದ ಎಲ್ಲ ಜಲಾಶಯಗಳಿಗೆ ವ್ಯಾಪಕ ಭದ್ರತೆ.
- ಭಾರತದ ಮಂದಿರಗಳು, ರಾಷ್ಟ್ರೀಯ ದೃಷ್ಟಿಕೋನದ ಪ್ರತೀಕ – ಕೇಂದ್ರ ಸಚಿವ ಗಜೇಂದ್ರಸಿಂಗ್ ಶೇಖಾವತ್.
- ಥಲಸ್ಸೇಮಿಯಾ; ಆನುವಂಶಿಕ ರಕ್ತರೋಗಗಳ, ಜನಜಾಗೃತಿ ದಿನಾಚರಣೆ.
- ಹಿರಿಯರ ಜಲಮೂಲ ರಚನೆಗಳ ಪುನಃಶ್ಚೇತನಕ್ಕೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಯೋಜನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>